ಕ್ರ. ಸಂ	ಜಿಲ್ಲಾ ಪಂಚಾಯತ್	ಬಿಡುಗಡೆ ಮಾಡಲಾದ ಅನುದಾನ
20	ಕಾರವಾರ	91 00
21	ಬಿಜಾಪುರ	155 00
22	ಬಾಗಲಕೋಟೆ	125 00
23	ಗುಲ್ಬರ್ಗಾ	162 00
24	ಬೀದರ್	77 00
25	ರಾಯಚೂರು	89 00
26	ಕೊಪ್ಪಳ	88 00
27	ಬಳ್ಳಾರಿ	134 00
	ಒಟ್ಟು	**3000 00**

(ಒಟ್ಟು ಮೂರು ಸಾವಿರ ಲಕ್ಷ ರೂಪಾಯಿಗಳು ಮಾತ್ರ)

497(689) ಶ್ರೀ ಕೃಷ್ಣ ಪಾಲೇಮಾರ (ಸೂರತ್ಕಲ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಬಡ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಒದಗಿಸಿಕೊಡುವಲ್ಲಿ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಮನೆ ಮತ್ತು ನಿವೇಶನಗಳನ್ನು ಒದಗಿಸಿಕೊಡಲಾಗಿದೆ,

ಆ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಜರುಗಿಸಿದೆ, ಇತ್ತೀಚೆಗಿನ ಸಮೀಕ್ಷೆಯ ಅನ್ವಯ ಎಷ್ಟು ಜನ ನಿವೇಶನ ರಹಿತರು ಇದ್ದಾರೆಂದು ಗುರುತಿಸಲಾಗಿದೆ,

ಇ) ವಸತಿ ರಹಿತ ಕುಟುಂಬಗಳಿಗೆ ಎಷ್ಟು ಮನೆಗಳನ್ನು ನಿರ್ಮಿಸಿಕೊಡಲು ಯೋಜನೆಯನ್ನು ರೂಪಿಸಲಾಗಿದೆ, ಫಲಾನುಭವಿಗಳನ್ನು ಗುರುತಿಸಲು ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳೇನು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡ ಕುಟುಂಬಗಳಿಗೆ ಕಳೆದ 2 ವರ್ಷಗಳಲ್ಲಿ ಅಂದರೆ 2004–05 ಮತ್ತು 2005–06 ರಲ್ಲಿ ಈ ಕೆಳಕಂಡಂತೆ ಮನೆ ಮತ್ತು ನಿವೇಶನಗಳನ್ನು ಒದಗಿಸಲಾಗಿದೆ

ವರ್ಷ	ಒದಗಿಸಿದ ಮನೆಗಳ ಸಂಖ್ಯೆ (ಗುರಿ)	ಹಂಚಿದ ನಿವೇಶನಗಳ ಸಂಖ್ಯೆ
2004–05	45086	4762
2005–06	300256	6814
ಒಟ್ಟು	345342	11576

ಆ) ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ 2005–06ನೇ ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯ್ತಿಗೆ 40 ಮನೆಗಳಂತೆ ಒಟ್ಟು 2,26,080 ಮನೆಗಳ ಗುರಿಯನ್ನು ನೀಡಲಾಗಿರುತ್ತದೆ ಮತ್ತು 2006–07ನೇ ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯ್ತಿಗೆ 60 ಮನೆಗಳಂತೆ ಮತ್ತು 2001ರ ಜನಗಣತಿಯ ಪ್ರಕಾರ 10000 ಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯ್ತಿಗಳಿಗೆ ಹೆಚ್ಚುವರಿಯಾಗಿ 60 ಮನೆಗಳ ಗುರಿಯನ್ನು ನೀಡಲಾಗಿದ್ದು ಒಟ್ಟು 3,40,560 ಮನೆಗಳ ಗುರಿಯನ್ನು ನೀಡಲಾಗಿದೆ

ಗ್ರಾಮೀಣ ಅಂಬೇಡ್ಕರ್ 2005–06ನೇ ಸಾಲಿನಲ್ಲಿ 24040 ಮನೆಗಳನ್ನು ನೀಡಲಾಗಿದೆ

ಇಂದಿರಾ ಆವಾಸ್ ಯೋಜನೆಯಡಿಯಲ್ಲಿ 2005–06ನೇ ಸಾಲಿನಲ್ಲಿ 50136 ಮತ್ತು 2006–07ನೇ ಸಾಲಿನಲ್ಲಿ 53299 ಮನೆಗಳ ಗುರಿಯನ್ನು ನೀಡಲಾಗಿದೆ

ಜೂನ್ 2003ರಲ್ಲಿ ಸ್ಥಳೀಯ ಸಂಸ್ಥೆಗಳ ಮೂಲಕ ನಿವೇಶನ ರಹಿತರ ಸಮೀಕ್ಷೆಯನ್ನು ಮಾಡಲಾಗಿದ್ದು, ಸಮೀಕ್ಷೆಯಂತೆ ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 1042986 ನಿವೇಶನ ರಹಿತರನ್ನು ಗುರುತಿಸಲಾಗಿದೆ

ಇ) ವಸತಿ ರಹಿತರ ಮತ್ತು ನಿವೇಶನ ರಹಿತರ ಸಮೀಕ್ಷೆಯ ನಂತರ 2005–06 ರಿಂದ 2006–07ರ ವರೆಗೆ ರಾಜ್ಯದಲ್ಲಿ ಒಟ್ಟು 744115 ಮನೆಗಳನ್ನು ನಿರ್ಮಿಸಿಕೊಡಲು ಯೋಜನೆಯನ್ನು ರೂಪಿಸಲಾಗಿದೆ

ಫಲಾನುಭವಿಗಳನ್ನು ಗುರುತಿಸಲು ಈ ಕೆಳಗೆ ಮಾನದಂಡಗಳು ಅನುಸರಿಸಲಾಗುತ್ತಿದೆ

1 ಗ್ರಾಮೀಣ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿ ಕರ್ನಾಟಕ ರಾಜ್ಯದ ಪ್ರಜೆಯಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ಗ್ರಾಮ ಪಂಚಾಯತಿಯ ನಿವೇಶನ ರಹಿತ/ವಸತಿ ರಹಿತರ ಪಟ್ಟಿಯಲ್ಲಿ ಸೇರಿರಬೇಕು ಹಾಗೂ ವಸತಿಗಾಗಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಅರ್ಜಿಗಳ ಮತ್ತು ಫಲಾನುಭವಿಗಳ ರಿಜಿಸ್ಟರ್‌ನಲ್ಲಿ ಸೇರ್ಪಡೆಯಾಗಿರಬೇಕು

2 ನಗರ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿ ಕರ್ನಾಟಕ ರಾಜ್ಯದ ಪ್ರಜೆಯಾಗಿದ್ದು, ನಗರ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ಸ್ಥಳೀಯ ಸಂಸ್ಥೆಗಳ ನಿವೇಶನರಹಿತ/ವಸತಿರಹಿತರ ಪಟ್ಟಿಯಲ್ಲಿ ಸೇರಿರಬೇಕು ಹಾಗೂ ವಸತಿಗಾಗಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಅರ್ಜಿಗಳ ಮತ್ತು ಫಲಾನುಭವಿಗಳ ರಿಜಿಸ್ಟರ್‌ನಲ್ಲಿ ಸೇರ್ಪಡೆಯಾಗಿರಬೇಕು

3 ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು

4 ಮನೆ/ನಿವೇಶನ ಹಕ್ಕು ಪತ್ರವನ್ನು ಮಹಿಳೆಯ ಹೆಸರಿನಲ್ಲಿಯೇ ವಿತರಿಸಬೇಕು ಒಂದು ವೇಳೆ ಅಂಗವಿಕಲರು, ಮಾಜಿ ಸೈನಿಕರು, ಏಕ ಮಹಿಳಾ ಒಡೆತನ, 60 ವರ್ಷಕ್ಕೂ ಮೇಲ್ಪಟ್ಟಿರುವ ನಾಗರೀಕರು ಮತ್ತು ವಿಧುರರು ಆಯ್ಕೆಯಾಗಿದ್ದಲ್ಲಿ ಅವರ ಹೆಸರಿನಲ್ಲಿ ಹಕ್ಕು ಪತ್ರ ವಿತರಿಸಬಹುದು

5 ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು

6 ನಿಯಮಾನುಸಾರ ಪರಿಶಿಷ್ಟ ಜಾತಿ/ಪಂಗಡದವರಿಗೆ ಮೀಸಲಾತಿ ಇರುತ್ತದೆ